INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,09- 15
Peer Reviewed Journal, Referred Journal

# ಚಾಮರಾಜನಗರ ಜಿಲ್ಲೆಯಲ್ಲಿ ಜೈನಧರ್ಮ–ಒಂದು ವಿವೇಚನೆ

**ಡಾ.ಕಾಳಸ್ವಾಮಿ.ಹೆಚ್.ಎನ್**[1]

ಕರ್ನಾಟಕಕ್ಕೆ ಜೈನಧರ್ಮವು ಕ್ರಿ.ಪೂ.ದಲ್ಲಿಯೇ ಬಂದಿತ್ತೆಂದು ಹಲವು ಆಧಾರಗಳಿಂದ ತಿಳಿದುಬರುತ್ತದೆ. ಜೈನಧರ್ಮದ ಇತಿಹಾಸವನ್ನು ಹೊಂದಿರುವ ಕರ್ನಾಟಕದ ದಕ್ಷಿಣ ಭಾಗಗಳಲ್ಲಿ ಚಾಮರಾಜನಗರ ಜಿಲ್ಲೆಯು ಒಂದು. ಈ ಜಿಲ್ಲೆಯು ನೈಸರ್ಗಿಕವಾಗಿ ಪ್ರಕೃತಿದತ್ತವಾದಂತಹ ಭಾಗಗಳಿಂದ ಕೂಡಿದೆ. ಕರ್ನಾಟಕ, ಕೇರಳ, ತಮಿಳುನಾಡು ಗಡಿಪ್ರಾಂತ್ಯದ ಆಯಕಟ್ಟಿನ ಸ್ಥಳಗಳನ್ನು ಹೊಂದಿದೆ. ಈ ಪ್ರದೇಶವನ್ನು ಗಂಗರು,ಚೋಳರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ದೊರೆಗಳು, ಉಮ್ಮತ್ತೂರು ಪಾಳೆಯಗಾರರು, ತೆರಕಣಾಂಬಿ ಪಾಳೆಯಗಾರರು, ಮೈಸೂರು ಅರಸರು ಪ್ರಮುಖವಾಗಿ ಆಳಿದವರಾಗಿದ್ದಾರೆ. ಇಂತಹ ರಾಜರ, ಪ್ರಧಾನರ, ಸಾಮಂತರ, ದಂಡನಾಯಕರ ಪೋಷಣೆಯಲ್ಲಿ ಜೈನಾಚಾರ್ಯರ ಮಾರ್ಗದರ್ಶನದಲ್ಲಿ ಜೈನಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇವುಗಳ ಕುರುಹಾಗಿ ಹಲವು ಶಾಸನಗಳು ದೊರೆತಿವೆ. ಈ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಜೈನಬಸದಿಗಳು ನಿರ್ಮಾಣವಾಗಿವೆ. ಅನೇಕ ಜೈನ ಕವಿಗಳು ಸಾಹಿತ್ಯ ರಚನೆ ಮಾಡಿರುವುದು ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಜೈನಧರ್ಮದ ಪ್ರಭಾವದ ಹಂತಗಳನ್ನು ಗುರುತಿಸಬಹುದು. ಜಿಲ್ಲೆಯಲ್ಲಿ ಹಲವು ಜೈನ ಶಾಸನಗಳಿವೆ. ಈ ಲೇಖನದ ಪ್ರಮುಖ ಉದ್ದೇಶವೆಂದೆ ಈ ಜಿಲ್ಲೆಯಲ್ಲಿ ದೊರೆಯುವ ಜೈನ ಶಾಸನಗಳು ಹಾಗೂ ಬಸದಿಗಳ ಆಧಾರದ ಮೇಲೆ ಜಿಲ್ಲೆಯಲ್ಲಿದ್ದ ಜೈನಧರ್ಮದ ಬಗ್ಗೆ ತಿಳಿಸುವುದೇ ಆಗಿದೆ.

ಗುಂಡ್ಲುಪೇಟೆಯ ಕ್ರಿ.ಶ.1196ರ ಶಾಸನವೊಂದರಲ್ಲಿ ಹೊಯ್ಸಳ ವೀರಬಲ್ಲಾಳನನ್ನು ಸಮ್ಯಕ್ತ್ವ ಚೂಡಾಮಣಿ ಎಂದು ಕರೆಯಲಾಗಿದೆ. ಕುಡುಗನಾಡ ಸಮಸ್ತ ಪ್ರಭುಗಾವುಂಡರುಗಳು ತುಪ್ಪೂರ ಬಿಟ್ಟಿ ಜಿನಾಲಯಕ್ಕೆ ಮದಹಳ್ಳಿಯನ್ನು ದತ್ತಿ ಬಿಟ್ಟಿದ್ದಾರೆ. ವಜ್ರನಂದಿ ಸಿದ್ಧಾಂತ ದೇವರ ಶಿಷ್ಯ, ನಾಗಪಂಡಿತರ ಮಗ ಕನಕನಂದಿಪಂಡಿತರ ಕಾಲು ತೊಳೆದು ಸಮಸ್ತಗಾವುಂಡರು ಜಿನಾಲಯದ ಜೀರ್ಣೋದ್ಧಾರ, ದೇವರ ಅಷ್ಟವಿಧಾರ್ಚನೆ ಮತ್ತು ಮುನಿಗಳ ಆಹಾರ ದಾನಕ್ಕೆ ದತ್ತಿ ಕೊಟ್ಟಿರುವುದನ್ನು ತಿಳಿಸುತ್ತದೆ. ಇದರ ಪಕ್ಕದಲ್ಲಿರುವ ಮತ್ತೊಂದು ಶಾಸನವು ಸಹ ವಿಜಯಪುರದ ಅನಂತದೇವರಿಗೆ ಕೆಲವು ಗೌಡಪ್ರಜೆಗಳು

---

1. ಸಂಶೋಧನಾ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ದತ್ತಿಯನ್ನು ನೀಡಿರುವುದನ್ನು ತಿಳಿಸುತ್ತದೆ. ಶಾಸನ ದೊರೆತಿರುವ ತುಪ್ಪೂರು ಗ್ರಾಮದಲ್ಲಿ ಯಾವುದೇ ವಸದಿ ಕಂಡುಬರುವುದಿಲ್ಲ. ಬಹುಶಃ ಬಸದಿ ಸಂಪೂರ್ಣವಾಗಿ ನಾಶವಾಗಿರಬಹುದು.

ಗುಂಡ್ಲುಪೇಟೆ ತಾಲೂಕಿನ ರಾಘವಾಪುರ ಕ್ರಿ.ಶ.1320ರ ಶಾಸನವು ಜೈನಶಾಸನವಲ್ಲದಿದ್ದರೂ ಸಹ ಜೈನಧರ್ಮದ ಸ್ಥಿತಿಗತಿಯ ಪರಿಶೀಲನೆಗೆ ನೆರವಾಗಿದೆ. ಈ ಶಾಸನ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ ಸೇರಿದುದಾಗಿದೆ. ಇದರಲ್ಲಿ ಕೇತೆಯ ದಂಡನಾಯಕನು ದೊರೆಯಿಂದ ಗುಮ್ಮಟಹಳ್ಳಿ ಮತ್ತು ಮಾಡ್ರಹಳ್ಳಿಗಳನ್ನು ಪಡೆದುಕೊಂಡು ತನ್ನ ಬಳಿ ಶ್ರೀಕರಣನಾಗಿದ್ದ ನಾರಣದೇವಣ್ಣನಿಗೆ ದತ್ತಿಕೊಟ್ಟನು. ಇವೆರಡು ಹಳ್ಳಿಗಳು ಅಗ್ರಹಾರವಾಗಿ ಪರಿವರ್ತಿತವಾದವು. ಗೊಮ್ಮಟಹಳ್ಳಿಗೆ ನಾರಣದೇವಣ್ಣನ ತಂದೆ ರಾಘವಾದೇವನ ಹೆಸರಿನಲ್ಲಿ ರಾಘವಪುರ ಎಂದು ಹೆಸರಾಯಿತು. ಕೆಲಸೂರಿನಲ್ಲಿ ಪಾರ್ಶ್ವನಾಥ ಬಸದಿಯೊಂದಿದೆ. ಇಲ್ಲಿ ನಾಲ್ಕು ಶಾಸನಗಳಿವೆ. ಬಸದಿಯ ಉತ್ತರ ಭಾಗದಲ್ಲಿರುವ ಶಾಸನದಲ್ಲಿನ ಆ ಬಸದಿಯನ್ನು ಸರ್ವಲೋಕಾಶ್ರಯ ಎಂದು ಕರೆದಿದೆ. ತಮಿಳಿನ ಶಾಸನದಲ್ಲಿ ಆ ನಾಡಿನ ಗಾವುಂಡನಾದ ವಿಕ್ರಮಚೋಳ ಪೆರ್ಮಾಡಿಯು ಕೆಲವು ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ. ಪಶ್ಚಿಮ ದಿಕ್ಕಿನ ಶಾಸನ ಕೆಲವು ಭಕ್ತರು ಬಸದಿಗೆ ಬಿಟ್ಟ ದತ್ತಿಯನ್ನು ತಿಳಿಸುತ್ತದೆ. ಬಸದಿಯ ಗೋಡೆಯ ಮೇಲಿರುವ 1826ರ ಶಾಸನದಲ್ಲಿ ಶಾಂತಪಂಡಿತನ ಮಗನ ವಿಜ್ಞಾಪನೆಯ ಮೇರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಕೆಲಸೂರಿನ ಚೈತ್ಯಾಲಯಕ್ಕೆ ಚಂದ್ರಪ್ರಭ ಮತ್ತು ವಿಜಯ ಪಾರ್ಶ್ವನಾಥ ತೀರ್ಥಂಕರರ ಮತ್ತು ಜ್ವಾಲಿನಿದೇವಿಯ ಶಿಲ್ಪಗಳನ್ನು ಪರತಿಷ್ಠಾಪಿಸಿ ಬಸದಿಯನ್ನು ಜೀರ್ಣೋದ್ಧಾರ ಮಾಡಿದ್ದಾಎ. ಬಸದಿಯು ಗರ್ಭಗೃಹ, ಅರ್ಧಮಂಟಪ, ನವರಂಗವನ್ನು ಹೊಂದಿದೆ. ಈ ಬಸದಿಯು ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. ಇಲ್ಲಿ ನಿಷಧಿ ಕಲ್ಲುಗಳಿವೆ. ಬಸದಿಯು ಚೆನ್ನಾಗಿದೆ.

ತೆರಕಣಾಂಬಿಯ ಪ್ರವಾಸಿ ಮಂದಿರದ ಬಳಿ ಬಿದ್ದಿದ್ದ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲೆ ರಾಜಗುರು ಮಂಡಲಾಚಾರ್ಯರಾದ ಸಮಯಾಭರಣ ಲಲಿತಕೀರ್ತಿ ಭಟ್ಟಾರಕರು ಮಾಡಿಸಿದ ಪ್ರತಿಮೆ ಎಂಬ ಬರಹವಿದೆ, ಇದು ಕ್ರಿ.ಶ.14ನೆಯ ಶತಮಾನದ ಬರಹವಾಗಿದೆ. ಪ್ರಸ್ತುತ ತೆರಕಣಾಂಬಿಯಲ್ಲಿ ಪಾರ್ಶ್ವನಾಥ ಬಸದಿಯಿಲ್ಲ ಆದರೆ ಪಾರ್ಶ್ವನಾಥನ ವಿಗ್ರಹ ಸಂತೇಮಾಳದಲ್ಲಿ ಅನಾಥವಾಗಿ ನಿಂತಿದೆ. ಇದೇ ಬಸದಿಯಲ್ಲಿದ್ದ ಪದ್ಮಾವತಿ ಯಕ್ಷಿಯ ವಿಗ್ರಹವನ್ನು ಚಾಮರಾಜನಗರದ ಬಸದಿಗೆ ಸಾಗಿಸಿರುವುದಾಗಿ ತಿಳಿದು ಬರುತ್ತದೆ.

ಹಂಗಳ ಗ್ರಾಮದ ಭೂಮಿಯೊಳಗೆ ಹಲವಾರು ಲೋಹದ ವಸ್ತುಗಳು ದೊರೆತಿವೆ. ದೊರೆತ ಅನೇಕ ಪೂಜಾ ವಸ್ತುಗಳಲ್ಲಿ 18 ವಸ್ತುಗಳ ಕೆಳಭಾಗದಲ್ಲಿ ಬರಹವಿದೆ. ಇವುಗಳು ಕ್ರಿ.ಶ.10ನೆಯ ಶತಮಾನದ ಲಿಪಿ ಲಕ್ಷಣಗಳನ್ನು ಹೊಂದಿದೆ. ಚವ್ವೀಸ ತೀರ್ಥಂಕರರ ಬಿಂಬದ ಹಂಬದಿಯ ಪಾದಪೀಠದಲ್ಲಿರುವ ಬರವಣಿಗೆಯಿಂದ ಚಿಕ್ಕಜೋಗಜ್ಜಿಯ ತಾಯಿ ಮಾಚಿಕಬ್ಬೆಯು ದಾಮನಂದಿ

ಭಟ್ಟಾರಕರ ಶಿಷ್ಯೆ ಎಂದು ತಿಳಿಯುತ್ತದೆ. ಮಿಕ್ಕ ವಸ್ತುಗಳ ಮೇಳೆ ಸರ್ವಲೋಕಾಶ್ರಯದನ ಪ್ರಿಯ ಭಾರ್ಯೆ ಚಿಕ್ಕಜೋಗಬ್ಬೆಯ ಹೆಸರುಗಳಿವೆ. ಚಿಕ್ಕಜೋಗಬ್ಬ ಒಬ್ಬ ಜನ ಮಹಿಳೆಯಾಗಿದ್ದಳು. ಅವಳು ಮಾಡಿಸಿದ ಲೋಹದ ಪೂಜಾಸಾಮಗ್ರಿಗಳು ಮೈಸೂರು ಶಾಸನ ಇಲಾಖೆಯ ಪ್ರಾಚ್ಯವಸ್ತು ವಿಭಾಗದಲ್ಲಿವೆ.

ಚಾಮರಾಜನಗರ ತಾಲೂಕಿನ ಮಲೆಯೂರು (ಕನಕಗಿರಿ) ಎಂಬಲ್ಲಿ ಪಾರ್ಶ್ವನಾಥ ಬಸದಿಯಿದೆ. ಬೆಟ್ಟದ ಮೇಲಿರುವ ಈ ಬಸದಿ ಪೂರ್ವಾಭಿಮುಖವಾಗಿದೆ. ಗಂಗ ಮತ್ತು ಚೋಳರ ದ್ರಾವಿಡ ವಿಮಾನವನ್ನು ಹೊಂದಿದ್ದು, ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮಹಾಮಂಟಪವನ್ನು ಹೊಂದಿದೆ. ನವರಂಗದ ಮುಂದೆ ಮತ್ತೆರಡು ಮಂಟಪಗಳಿವೆ. ಗರ್ಭಗೃಹ, ಸುಖನಾಸಿ ಮತ್ತು ನವರಂಗ ಮಾತ್ರ ಪ್ರಾಚೀನ ಕಾಲದ್ದಾಗಿವೆ. ಮಂಟಪಗಳೆರಡು ವಿಜಯನಗರ ಮತ್ತು ಆನಂತರದ ಕಾಲದ್ದಾಗಿವೆ. ಗರ್ಭಗೃಹದಲ್ಲಿ ಏಳು ಹೆಡೆಯ ಸರ್ಪದ ಕೆಳಗಡೆ ಧ್ಯಾನಮುದ್ರೆಯಲ್ಲಿ ಕುಳಿತಿರುವ ಸುಮಾರು ಐದು ಅಡಿ ಎತ್ತರದ ಪಾರ್ಶ್ವನಾಥನ ಶಿಲ್ಪವಿದೆ. ಪ್ರಭಾವಳಿಯಲ್ಲಿ ಪದ್ಮಾವತಿ ಮತ್ತು ಧರಣೇಂದ್ರ ಯಕ್ಷನನ್ನು ಚಿತ್ರಿಸಲಾಗಿದೆ. ನವರಂಗದಲ್ಲಿ ಯಕ್ಷ ಮತ್ತು ಯಕ್ಷಿಯ ಬಿಡಿಶಿಲ್ಪಗಳಿವೆ. ಈ ಬಸದಿ ಮೂಲಸಂಘ, ದೇಸಿಯಗಣ ಮತ್ತು ಪುಸ್ತಕಗಚ್ಛ ಸಂಪ್ರದಾಯಕ್ಕೆ ಸೇರಿದ್ದಾಗಿದೆ. ಇಲ್ಲಿ ಕ್ರಿ.ಶ.1181ರ ದಾನ ಶಾಸನವಿದೆ. ಅಚ್ಚುತ ವೀರೇಂದ್ರ ಎಂಬ ರಾಜ ಪ್ರಮುಖರು ಇಲ್ಲಿನ ವಿದ್ಯಾನಂದಸ್ವಾಮಿಯ ಮೂಲಕ ಬಸದಿಯನ್ನು ಆಚಾರ್ಯರಿಗೆ ದಾನ ನೀಡಿದ ವಿವರವಿದೆ. ವಿಜಯನಗರದ ಕೊರೆ ಹರಿಹರನ ಶಾಸನದಲ್ಲಿ ಕನಕಗಿರಿಯ ವಿಜಯ ಪಾರ್ಶ್ವನಾಥನ ಪೂಜೆಗಾಗಿ ನೀಡಿದ ದಾನಧರ್ಮಗಳನ್ನು ಉಲ್ಲೇಖಿಸುತ್ತದೆ.

ಚಾಮರಾಜನಗರ ತಾಲೂಕಿನಲ್ಲಿ ಕುದೇರು ಎಂಬ ಚಿಕ್ಕ ಗ್ರಾಮವಿದ್ದು ಇಲ್ಲಿ ಆದಿನಾಥನ ಬಸದಿಯಿದೆ. ಇಲ್ಲಿನ ಕ್ರಿ.ಶ.1248–49ರ ಹೊಯ್ಸಳ ಶಾಸನವು ವೀರಸೋಮೇಶ್ವರನ ಕಾಲದ್ದು. ಬಸದಿಯು ಗರ್ಭಗೃಹ, ಸುಖನಾಸಿ, ಅರ್ಧಮಂಟಪ ಮತ್ತು ನವರಂಗವನ್ನು ಹೊಂದಿದೆ. ದ್ರಾವಿಡ ಶೈಲಿಯಲ್ಲಿರುವ ಈ ಬಸದಿಯು ಏಕಕೂಟವಾಗಿದೆ. ಗರ್ಭಗೃಹದಲ್ಲಿ ಆದಿನಾಥನ ಶಿಲ್ಪವಿದೆ. ಪ್ರಭಾವಳಿಯ ಇಕ್ಕೆಲಗಳಲ್ಲಿ ಚತುರ್ಬಾಹು ಯಕ್ಷಿಣಿಯರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ತೀರ್ಥಂಕರರ ಬಿಂಬವಿದೆ. ನವರಂಗದಲ್ಲಿ ಜೈನ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಕುದುರೆ ಮೇಲೆ ಕುಳಿತ ಬ್ರಹ್ಮ, ಜ್ವಾಲಾಮಾಲಿನಿ, ಯಕ್ಷಿ, ಸರಸ್ವತಿ ಮತ್ತು ತೀರ್ಥಂಕರರ ಶಿಲ್ಪ ಮತ್ತು ಇನ್ನಿತರ ಕಂಚಿನ ಶಿಲ್ಪಗಳಿವೆ. ಪ್ರಸ್ತುತ ಬಸದಿ ಶಿಥಿಲವಾಗುತ್ತಿದೆ. ಇದೇ ತಾಲೂಕಿನ ಉಮ್ಮತ್ತೂರಿನಲ್ಲಿ ಬಸದಿಯೊಂದಿದೆ. ಇಲ್ಲಿನ ಕ್ರಿ.ಶ.18ನೆಯ ಶತಮಾನದ ಶಾಸನದಲ್ಲಿ ಪಾಯಣಪಂಡಿತರು ಮರ್ಧಮಾನಸ್ವಾಮಿಯ ಸೇವೆ ಎಂದಿದೆ. ಕುಲಗಾಣದಲ್ಲಿರುವ ಕ್ರಿ.ಶ.1241ರ ಶಾಸನದಲ್ಲಿ ಎಡೆನಾಡ ಕುಲಗಾಣದ ಬಸದಿಗೆ ಮಹಾಪ್ರಧಾನ, ಸೇನಾಧಿಪತಿ, ಸರ್ವಾಧಿಕಾರಿಯಾದ ಕೇತಯ್ಯ ದಂಡನಾಯಕನು ತೆರಿಗೆಗಳಿಂದ ಬಂದ ಹಣವನ್ನು ದಾನವನ್ನಾಗಿ ನೀಡಿರುವ ಉಲ್ಲೇಖವಿದೆ. ಆದರೆ ಪ್ರಸ್ತುತವಾಗಿ ಈ ಗ್ರಾಮದಲ್ಲಿ ಯಾವುದೇ ಬಸದಿ ಇರುವುದಿಲ್ಲ. ಇದೇ ಗ್ರಾಮದ ಕ್ರಿ.ಶ.7–8ನೆಯ

ಶತಮಾನದ ಗಂಗರ ಕಾಲದ ತಾಮ್ರ ಶಾಸನದಲ್ಲಿಯೂ ಚೈತ್ಯಾಲಯಕ್ಕೆ ದಾನ ನೀಡಿದ ಉಲ್ಲೇಖವಿದೆ. ಇದೇ ತಾಲೂಕಿನ 1482ರ ಶಾಸನದಲ್ಲಿ ವೀರಸೋಮೇಶ್ವರರಾಯ ಒಡೆಯರ ಕರಣಿಕನಾದ ದೇವರಸನು ಹರವೆಯಲ್ಲಿ ಚೈತ್ಯಾಲಯ ಮತ್ತು ಪಾಕಶಾಲೆಯನ್ನು ಮಾಡಿಸಿ ಆದಿ ಪರಮೇಶ್ವರನನ್ನು ಪ್ರತಿಷ್ಠಾಪಿಸಿದರು. ಕ್ರಿ.ಶ.1486ರ ನಿಷಧಿ ಕಲ್ಲೊಂದಿದೆ. ಇದು ಶಾಸನೋಕ್ತವಾಗಿದ್ದು ಇದರಲ್ಲಿ ದೇವರಸರ ಹಿರಿಯ ಹೆಂಡತಿ ಸೋಮಾಯಿಯು ನಿಷಧಿಯಾದ ಬಗ್ಗೆ ಉಲ್ಲೇಖವಿದೆ. ಪ್ರಸ್ತುತ ಈ ಗ್ರಾಮದಲ್ಲಿ ಯಾವುದೇ ಬಸದಿ ಇರುವುದಿಲ್ಲ. ಯಳಂದೂರಿನ ಯರಗಂಬಳ್ಳಿಯ ಹೊರವಲಯದ ಜಮೀನಿನಲ್ಲಿ ಜಿನ ಶಿಲ್ಪಗಳಿವೆ. ಇವುಗಳು ಅಲ್ಪಪ್ರಮಾಣದಲ್ಲಿ ಭಗ್ನವಾಗಿವೆ. ಬಹುಶಃ ಇಲ್ಲಿ ಹಿಂದೆ ಬಸದಿಯಿದ್ದಿರಬಹುದೆಂದು ಹೇಳಬಹುದು.

ಚಾಮರಾಜನಗರ ಪಟ್ಟಣದ ಮಧ್ಯಭಾಗದಲ್ಲಿರುವ ಚಾಮರಾಜೇಶ್ವರ ದೇವಾಲಯದ ಆಗ್ನೇಯ ಭಾಗದಲ್ಲಿ ಪಾರ್ಶ್ವನಾಥ ಬಸದಿಯಿದೆ. ಕ್ರಿ.ಶ.1116ರ ಶಾಸನದಲ್ಲಿ ಎಣ್ಣೆನಾಡಿನ ಪ್ರಾಂತ್ಯದ ಅರಕೊತಾರದಲ್ಲಿ ತ್ರಿಕೂಟ ಬಸದಿಯನ್ನು ಪುಣಿಸರಾಜ ದಂಡಾದೀಪ ಎಂಬುವವನು ಪುಣಿಸ ಜಿನಾಲಯವನ್ನು ಕಟ್ಟಿಸಿದನು. ಪ್ರಸ್ತುತವಾಗಿ ಈ ಬಸದಿಯು ಜೀರ್ಣೋದ್ಧಾರವಾಗಿದ್ದು ಪೂಜಾ ಕಾರ್ಯಗಳು ನಡೆಯುತ್ತಿವೆ. ಇಲ್ಲಿಯ ಮಹಾಪ್ರಭು ಕಾಮಯ್ಯನಾಯಕರ ಮಗ ವೀರಯ್ಯನಾಯಕನು ವಿಜಯನಾಥ ದೇವರಿಗೆ ಮುಣಚಣಹಳ್ಳಿಯನ್ನು ದಾನವಾಗಿ ನೀಡಿರುವ ಉಲ್ಲೇಖವಿದೆ. ಇಲ್ಲಿನ ಕ್ರಿ.ಶ.1203ರ ಶಾಸನದಲ್ಲಿ ಉತ್ತರಾಯಣ ಸಂಕ್ರಮಣದ ದಿನ ಅರಿಕುತಾರದ ಬಸದಿಗೆ ಕೇತಗಾವುಂಡನ ಮಗ ಬಿಟ್ಟಿಗಾವುಂಡ, ಅಲ್ಲಾಳಗಾವುಂಡನ ಮಗ ದಾಸೆಗಾವುಂಡರು, ನೀರಿನ ಕರ, ಮನೆಕರ ಮುಂತಾದವುಗಳಿಂದ ಬಂದ ಹಣವನ್ನು ಬಸದಿಗೆ ನೀಡಿರುವ ಉಲ್ಲೇಖವಿದೆ.

ಕೊಳ್ಳೇಗಾಲದಿಂದ ಸುಮಾರು 5 ಕಿ.ಮೀ. ದೂರದಲ್ಲಿ ಧನಗೆರೆ ಎಂಬ ಹಳ್ಳಿಯಿದೆ. ಈ ಗ್ರಾಮದ ಪೂರ್ವ ಭಾಗದಲ್ಲಿರುವ ಒಂದು ಜಮೀನಿನಲ್ಲಿ ಜೈನ ಅವಶೇಷಗಳು ದೊರೆತಿವೆ. ಇಲ್ಲಿಯ ಒಂದು ಶಿಲ್ಪವನ್ನು ಪ್ರಾಚ್ಯವಸ್ತು ಸಂಗ್ರಹಾಲಯ ಶ್ರೀರಂಗಪಟ್ಟಣ ಇಲ್ಲಿ ಇಡಲಾಗಿದೆ. ಕೊಳ್ಳೇಗಾಲದ ಪಕ್ಕದಲ್ಲಿರುವ ಬಸ್ತಿಪುರ (ಬಸದಿಪುರ) ಎಂಬುದು ಸಹ ಒಂದು ಜೈನ ಕೇಂದ್ರವಾಗಿತ್ತು. ಇಲ್ಲಿ ಪೂಜ್ಯಪಾದನು ಹಲವು ಕಾಲದವರೆಗೆ ಜೀವಿಸಿದ್ದನು. ದೇವನಂದಿ ಎಂಬ ಹೆಸರಿನ ಈ ಆಚಾರ್ಯನಿಗೆ ಪೂಜ್ಯಪಾದನೆಂದು ಸಹ ಕರೆಯುತ್ತಿದ್ದರು. ಕೊಳ್ಳೇಗಾಲದ ಮನುಗನಹಳ್ಳಿ ಎಂಬ ಗ್ರಾಮದ ಹೊರವಲಯದಲ್ಲಿರುವ ಒಂದು ಜಮೀನಿನಲ್ಲಿ ಜಿನಶಿಲ್ಪಗಳು ಕಂಡುಬಂದಿವೆ. ಇಲ್ಲಿ ನಿಷಧಿ ಕಲ್ಲುಗಳು ಸಹ ಇವೆ. ಕೊಳ್ಳೇಗಾಲ ರಾಘವೇಂದ್ರಸ್ವಾಮಿ ದೇವಾಲಯದ ಎದುರುಗಡೆ ಪಾಳುಬಿದ್ದಿರುವ ಮಂಟಪದಲ್ಲಿ ಪಾರ್ಶ್ವನಾಥನ ಶಿಲ್ಪವಿದೆ ಮತ್ತು ಪಟ್ಟಣದ ಕೊಳದ ಪಕ್ಕದಲ್ಲಿ ನಿಷಧಿ ಶಿಲ್ಪವಿದೆ. ಮೇಲಿನ ಅಂಶಗಳನ್ನು ಗಮನಿಸಿದರೆ

ಚಾಮರಾಜನಗರ ಜಿಲ್ಲೆಯಾದ್ಯಂತ ಕ್ರಿ.ಶ.ಸುಮಾರು 6–7ನೆಯ ಶತಮಾನಗಳಿಂದಲೂ ಸಹ ಜೈನಧರ್ಮವಿತ್ತೆಂದು ಹೇಳಬಹುದು.

ಕನ್ನಡ ನಾಡಿನಲ್ಲಿ ಈ ಜೈನಧರ್ಮವು ಉನ್ನತದಲ್ಲಿದ್ದ ಕಾಲದಲ್ಲಿ ಈಗಿನ ಬಸ್ತಿಪುರ ಗ್ರಾಮವು ಬಸದೀಪುರ ಎಂಬ ಹೆಸರಿನಲ್ಲಿ ಜೈನದ ಧಾರ್ಮಿಕ ಕೇಂದ್ರವಾಗಿತ್ತು. ಕ್ರಿ.ಶ.480ರಲ್ಲಿ ಪೂಜ್ಯಪಾದರು ಹಾಗೂ 7–8ನೇ ಶತಮಾನದಲ್ಲಿ ಪುಷ್ಪನಂದಿ ಎಂಬ ಜೈನ ಯತಿಗಳು ಬಸದಿಪುರದಲ್ಲಿ ವಾಸವಾಗಿದ್ದರು ಎಂಬುದಾಗಿ ತಿಳಿದುಬರುತ್ತದೆ. ಬಸದೀಪುರದಲ್ಲಿ ಕ್ರಿ.ಶ.480ರಲ್ಲಿ ಪೂಜ್ಯಪಾದರು ಬದುಕಿದ್ದರೆಂದೂ ತಿಳಿದುಬರುತ್ತದೆ. ಇವರು ವ್ಯಾಕರಣ ಪಂಡಿತರು, ವೈದ್ಯರು ಆಗಿದ್ದು, ಸಂಸ್ಕೃತ ಭಾಷೆಯಲ್ಲಿ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ.ಅಂದಿನ ಕಾಲಕ್ಕೆ ಜೈನಧಾರ್ಮಿಕ ಕ್ಷೇತ್ರವಾದ ಇಂದಿನ ಬಸ್ತಿಪುರದಲ್ಲಿದ್ದರೆಂಬುದಾಗಿ ತಿಳಿದುಬರುತ್ತದೆ. ಅಲ್ಲದೆ ಕ್ರಿ.ಶ.4–5ನೇ ಶತಮಾನಕ್ಕೆ ಸೇರುವ ಜೈನ ಶಾಸನಗಳು ಪತ್ತೆಯಾಗಿವೆ. ಇದರಿಂದಾಗಿ ಆ ಕಾಲಕ್ಕೆ ಮುಂಚೆಯೇ ಜೈನಧರ್ಮವು ಚಾಮರಾಜನಗರ ಜಿಲ್ಲೆಯನ್ನು ಪ್ರವೇಶಿಸಿ ಪಸರಿದ್ದಂತೆ ಕಾಣಬರುತ್ತದೆ. ಆದರೆ ಈಗ ಅವರಿಗೆ ಇಲ್ಲಿ, ಆ ಕಾಲದ ಯಾವುದೇ ಪ್ರಾಚೀನ ಸ್ಮಾರಕಗಳು ಇಲ್ಲ. ಆದರೆ ಇಲ್ಲಿರುವ ಜಿನಮೂರ್ತಿಯನ್ನು ತಮಿಳುನಾಡಿನ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗಿದೆ.

ಕೊಳ್ಳೇಗಾಲದಿಂದ ಸುಮಾರು ಐದು ಮೈಲಿ ದೂರದಲ್ಲಿರುವ ದನಗೆರೆಯ ಹತ್ತಿರ ಒಂದು ಹೊಲದಲ್ಲಿ ಬಸದಿಯ ಅವಶೇಷವು ಕಂಡುಬಂದಿದ್ದು ಅಲ್ಲಿದ್ದ ಐದಾರು ಜಿನಬಿಂಬಗಳು ಪತ್ತೆಯಾಗಿವೆ. ಅವುಗಳಲ್ಲಿ ಮಣಗಹಳ್ಳಿಯು ಸಮಂತ ಭದ್ರನೆಂಬ ಜೈನಾಚಾರ್ಯನ ತಪೋಭೂಮಿಯೆಂದು ದೇವಚಂದ್ರನು 'ರಾಜಾವಳಿ ಕಥೆ'ಯಲ್ಲಿ ತಿಳಿಸಿರುವನು. ಸುಮಾರು ಕ್ರಿ.ಶ.400ರಲ್ಲಿ ಈತನು ಭಾರತವನ್ನೆಲ್ಲಾ ಸಂಚರಿಸಿ ರಾಜಸ್ಥಾನಗಳಲ್ಲಿ ತನ್ನ ಮಾಂತ್ರಿಕ ಶಕ್ತಿ ತಾರ್ಕಿಕ ಬುದ್ಧಿಗಳಿಂದ ಜೈನ ಧರ್ಮದ ಪ್ರಭಾವವನ್ನು ಬೀರಿದನು. ಬಸದಿಪುರದಲ್ಲಿ ಜೈನಾಚಾರ್ಯನಾದ ಪೂಜ್ಯಪಾದನು ಬಹುಕಾಲ ವಾಸವಾಗಿದ್ದನು. ದೇವನಂದಿ ಎಂಬ ಹುಟ್ಟು ಹೆಸರಿನ ಈ ಆಚಾರ್ಯನೆ ಮುಂದೆ 'ಜಿನೇಂದ್ರ ಬುದ್ಧಿ' ಎಂಬ ಹೆಸರನ್ನು ಪೆದನೆಂದೂ ವನದೇವತೆಗಳಿಂದ ಪಾದಪೂಜೆ ಮಾಡಿಸಿಕೊಂಡಿದ್ದರಿಂದ ಪೂಜ್ಯಪಾದನೆಂಬ ಹೆಸರನ್ನು ಹೊಂದಿದ್ದರು ಎಂಬ ಐತಿಹ್ಯವಿದೆ.

ಈತನು ಪುರುಷ ಸಿದ್ಧಿ ಪಡೆದಿದ್ದ, ಇವನಿಂದ ಕಬ್ಬಣವು ಚಿನ್ನವಾಯಿತೆಂದು ಪ್ರತೀತಿ ಇದೆ. ರಾಜಾವಳಿ ಕಥೆಯಲ್ಲಿ ಸೂಚಿತವಾಗಿರುವಂತೆ ಈತನ ತಂದೆ ಮಾಧವಬೆಟ್ಟ, ತಾಯಿ ಶ್ರೀದೇವಿ, ಜೈನಶಾಸ್ತ್ರದಲ್ಲಿ ಬಲ್ಲಿದನಾಗಿದ್ದ . ಈತನು ಜಿನ ದೀಕ್ಷೆ ಹೊಂದಿ ಕೆಲವು ಕಾಲ ತಪಸ್ಸುಗೈದ ಮೇಲೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮೊದಲಾದ ಪ್ರಾಂತ್ಯಗಳಲ್ಲಿ ತೀರ್ಥಯಾತ್ರೆಗೈದು ಇಂದಿನ ಗೋಪಿಶೆಟ್ಟಿ ಪಾಳ್ಯಕ್ಕೆ ಸೇರಿದ ಕೊಂಗಳ್ಳಿ ಬೆಟ್ಟಕ್ಕೆ ಬಂದು ಅಲ್ಲಿರುವ ಜಿನಾಗಮನಗಳ ವ್ಯಾಸಂಗ

ಮಾಡತೊಡಗಿದನು. ಆದರೆ ಕೆಲವೊಂದು ಸಿದ್ಧಾಂತಗಳು ಅರ್ಥವಾಗದೆ ಇದ್ದುದರಿಂದ ಪಾದಲೇಪ ಔಷಧಿ ಸಾಮರ್ಥ್ಯದಿಂದ ಈತನು ಪೂರ್ವವಿದೇಹಕ್ಕೆ ಹೋಗಿ ಅಲ್ಲಿ ಸಮವಸರಣದಲ್ಲಿದ್ದ ಶ್ರೀ ಜಿನಪತಿಗಳಿಂದ ಸಂದೇಹ ನಿವಾರಣೆ ಮಾಡಿಕೊಂಡು ಅದನ್ನು ಗ್ರಂಥಸ್ಥಗೊಳಿಸಿದನು. ಈತನು ಶ್ರವಣಬೆಳಗೊಳದ ಶಾಸನಗಳಲ್ಲಿ ವರ್ಣಿತನಾಗಿದ್ದಾನೆ. ಈತನ ಸೋರಳಿಯ ನಾಗಾರ್ಜುನ ಎನ್ನುವವನು. ಮಾವ ಅಳಿಯ ಇಬ್ಬರು ರಸವಿದ್ಯೆಯಲ್ಲಿ (ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವುದು) ಪಾರಂಗತರಾಗಿದ್ದರು. ಈ ಇಬ್ಬರು ಮಲೆಯೂರಿನ ಕನಕಗಿರಿ ಕ್ಷೇತ್ರದಲ್ಲಿ ಸಮಾಧಿಯಾಗಿದ್ದಾರೆ. ಕೊಳ್ಳೇಗಾಲ ತಾಲೂಕಿನಲ್ಲಿ ಜೈನ ಸಮಾಜದ ಗುಂಪು ಈಗ ಇಲ್ಲ. ಕ್ರಿ.ಶ.4ನೇ ಶತಮಾನದಿಂದ 12–13ನೇ ಶತಮಾನದಲ್ಲಿಯೂ ಜೈನ ಬೆಳವಣಿಗೆಯನ್ನು ಕಾಣಬಹುದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೊಳ್ಳೇಗಾಲದ ಕೊಳದ ಪಕ್ಕದಲ್ಲಿ ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿರುವ ಒಂದು ಜಿನ ಶಿಲ್ಪವು ಸಂಶೋಧನೆಯಿಂದ ಕಂಡುಬಂದಿರುತ್ತದೆ. ಈ ಹಿನ್ನೆಲೆಯನ್ನು ಗಮನಿಸಿದರೆ, ಕೊಳ್ಳೇಗಾಲ ತಾಲೂಕು ಪ್ರಾಂತ್ಯದಲ್ಲಿ ಜೈನಸಮಾಜ ಇತ್ತೆಂಬುದು ನನ್ನ ಅಭಿಪ್ರಾಯವಾಗಿದೆ. ಅಲ್ಲದೆ ಕೊಳ್ಳೇಗಾಲ ತಾಲೂಕಿನಲ್ಲಿ ಜಿನನಾಣ್ಯವು ಸಹ ಪತ್ತೆಯಾಗಿದೆ. ಇದರ ಪ್ರಕಾರ ವರ್ಧಮಾನ ಮಹಾವೀರನ ಜೈನ ಚಿಹ್ನೆ ಇರುವ ನಾಣ್ಯದ ಬಗ್ಗೆ ತಿಳಿಯುವುದಾದರೆ, ಕ್ರಿ.ಶ.1717ರ ಕಾಲಕ್ಕೆ ಸೇರಿದ ಈ ನಾಣ್ಯವು ಜೈನ ಪರಂಪರೆಯ ಬಗ್ಗೆ ತಿಳಿಸುತ್ತದೆ. ಕ್ರಿ.ಶ.1717ರ ಕಾಲಕ್ಕೆ ಈ ಭಾಗದಲ್ಲಿ ಈಸ್ಟ್ ಇಂಡಿಯಾ ಕಂಪನಿ ಕಾಲದಲ್ಲಿಯೂ ನಾಣ್ಯಗಳ ಮೂಲಕ ಪ್ರಚಲಿತವಾಗಿತ್ತೆಂದು ತಿಳಿಯಬಹುದಾಗಿದೆ. ಇದರಿಂದ ಜೈನ ಸಮಾಜದ ಬೆಳವಣಿಗೆ ಇನ್ನೂ ಸಹ ಜೀವಂತವಾಗಿತ್ತೆಂದು ತಿಳಿಯಬಹುದಾಗಿದೆ. ಶ್ರವಣಬೆಳಗೊಳದ ಚಂದ್ರಗಿರಿ ಅಥವಾ ಚಿಕ್ಕಬೆಟ್ಟದ ಮೇಲಿರುವ ಪಾರ್ಶ್ವನಾಥಸ್ವಾಮಿಯ ಬಸ್ತಿಗೆ ದಕ್ಷಿಣ ಬಂಡೆಯ ಮೇಲಿರುವ ಶಿಲಾ ಲೇಖವು ಜೈನಧರ್ಮದ ಬಗ್ಗೆ ತಿಳಿಸುತ್ತಾ, ಕ್ರಿ.ಪೂ.2ನೇ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತೆಂದು ಹೇಳಲು ಆಧಾರಗಳಿವೆ. ಆದರೆ ಕೊಳ್ಳೇಗಾಲ ತಾಲೂಕಿನಲ್ಲಿ ಕ್ರಿ.ಶ.4ನೇ ಶತಮಾನಕ್ಕೆ ಜೈನಧರ್ಮ ಮತ್ತು ಅದಕ್ಕೆ ಪೂರಕವಾದ ಒಂದು ಸಮಾಜವು ಈ ತಾಲೂಕಿನ ನಾಲ್ಕು ಕಡೆಗಳಲ್ಲಿರುವುದನ್ನು ಗಮನಿಸಬಹುದಾಗಿದೆ.

## ಪರಾಮರ್ಶನ ಗ್ರಂಥಗಳು

1. ಮಲೆಯೂರು ಗುರುಸ್ವಾಮಿ, (ಪ್ರ.ಸಂ.), ಸೋಮಶೇಖರ ಬಿಸಲ್ವಾಡಿ (ಸಂ), ಹೊನ್ನುಹೊಳೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚಾಮರಾಜನಗರ, 2007.
2. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1979.
3. ಚಿದಾನಂದ ಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150), ಸಪ್ನ ಬುಕ್ ಹೌಸ್, ಬೆಂಗಳೂರು, ಆರನೆಯ ಮುದ್ರಣ, 2014.

4. ತಿಪ್ಪೇರುದ್ರಸ್ವಾಮಿ, ಎಚ್.,ಕರ್ನಾಟಕ ಸಂಸ್ಕೃತಿ ಸಮೀಕ್ಷೆ,ಡಿ.ವಿ.ಕೆ.ಮೂರ್ತಿ ಪ್ರಕಾಶನ,ಮೈಸೂರು, 1968.
5. ರಾಜಶೇಖರ್,ಎಸ್., ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್, ಧಾರವಾಡ, 1988.
6. ವಾಸುದೇವನ್, ಸಿ.ಎಸ್., (ಸಂ), ಮುಕ್ಕೊಡೆ, ಜೈನಸಂಸ್ಕೃತಿ ಕುರಿತ ಲೇಖನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.
7. ಶಾರದಾ,ಕೆ,–ಕರ್ನಾಟಕದಲ್ಲಿ ಜೈನಧರ್ಮ,ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
8. ಸೀತರಾಮ ಜಾಗೀರ್ದಾರ್, ಕಂಬದಹಳ್ಳಿ: ಒಂದು ಜೈನ ಕೇಂದ್ರ, ಅತ್ತಿಮಬ್ಬೆ ಪ್ರಕಾಶನ, ಮೈಸೂರು, 1999